ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343 ಇ-ಮೇಲ್ ವಿಳಾಸ : director.ahr.kptcl@gmail.com

**ಸಂಖ್ಯೆ: ಕವಿಪ್ರನಿನಿ/ಬಿ16/5607/2000-01(2)(ಎ)** 01 MAR 2023

ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
ಹೆಸ್ಕಾಂ,
ವಿಜಯಪುರ.

ಮಾನ್ಯರೆ,

**ವಿಷಯ:** ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-6 ಕ್ರಮ ಸಂಖ್ಯೆ: 12(ಬಿ)(1) ರ ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಸ್ಪಷ್ಟೀಕರಣ

**ಉಲ್ಲೇಖ:**
1. ತಮ್ಮ ಕಚೇರಿಯ ಪತ್ರ ಸಂಖ್ಯೆ: ವಿಜೆಪಿ/ಅಅ(ವಿ)/ಉಲೆನಿ/ಹಿಸ(ಸಿ)/2022-23/10395-97 ದಿನಾಂಕ: 06.02.2023.
2. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/5607/2000-01(2)(ಎ) ದಿನಾಂಕ: 23.12.2022.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಯಪುರ ವೃತ್ತದಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗಳು ಖಾಲಿ ಇದ್ದು, ಕಂಪನಿಯ ದೈನಂದಿನ ಕೆಲಸ ಕಾರ್ಯಗಳ ಹಾಗೂ ಗ್ರಾಹಕರ ಹಿತದೃಷ್ಟಿಯಿಂದ ಮಾನ್ಯ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳು ಅಂತಿಮವಾಗುವವರೆಗೆ, ಕ್ರಮ ಸಂಖ್ಯೆ: 12(ಬಿ)(1) ಕೊಟಾದಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗಳಿಗೆ ಸ್ವತಂತ್ರ ಪ್ರಭಾರದಡಿಯಲ್ಲಿ ಪದೋನ್ನತಿ ನೀಡು ಕುರಿತು ಸೂಕ್ತ ನಿರ್ದೇಶನ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಕೋರಲಾಗಿರುತ್ತದೆ.

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ- 6 ರ ಕ್ರಮ ಸಂಖ್ಯೆ: 12()(1) ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಬಡ್ತಿ ನೀಡುವ ವಿಷಯದಲ್ಲಿ

ಹಲವಾರು ನೌಕರರು ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಇರುತ್ತವೆ. ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಕ್ರಮ ಕೈಗೊಳ್ಳಬೇಕಿದ್ದು, ಪ್ರಸ್ತುತ ಸ್ವತಂತ್ರ ಪ್ರಭಾರದಲ್ಲಿ ಪದೋನ್ನತಿ ನೀಡುವುದು ಸಮಂಜಸವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸೂಚಿಸಿದೆ. ಆದಾಗ್ಯೂ, ಸದರಿ ವಿಷಯದಲ್ಲಿ ನಿಗಮದಿಂದ ನಿರ್ದೇಶನ ನೀಡುವವರೆಗೂ, ಯಾವುದೇ ಸ್ಪಷ್ಟೀಕರಣ/ಅನುಮೋದನೆಯನ್ನು ಕೋರದಂತೆ ತಿಳಿಸಲಾಗಿದೆ.

ಇನ್ನು ಮುಂದೆ, ಯಾವುದೇ ಸ್ಪಷ್ಟೀಕರಣ/ಅನುಮೋದನೆ/ನಿರ್ದೇಶನ ನೀಡುವಂತೆ ಕೋರಿ ಪ್ರಸ್ತಾವನೆಗಳನ್ನು ನೇರವಾಗಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸದೇ, ನಿಗಮದ ದಿನಾಂಕ: 28.11.2019 ರ ಸುತ್ತೋಲೆಯಂತೆ ತಮ್ಮ ಕಂಪನಿ ಕಾರ್ಯಾಲಯದ ಮುಖಾಂತರ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

ಪ್ರತಿಯನ್ನು:

1. ಎಲ್ಲಾ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ), ಬೆಸ್ಕಾಂ, ಬೆಂಗಳೂರು/ಮೆಸ್ಕಾಂ, ಮಂಗಳೂರು/ಸೆಸ್ಕ್, ಮೈಸೂರು/ಹೆಸ್ಕಾಂ, ಹುಬ್ಬಳ್ಳಿ/ ಜೆಸ್ಕಾಂ, ಕಲಬುರಗಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಎಸ್ಕಾಂಗಳು.